# ರೇಪ್ ಎನ್ನುವ ವಿಕೃತಿಗೆ ಎಷ್ಟು ಬಣ್ಣ ಹಚ್ಚುತ್ತೀರಿ!

ಲೈಂಗಿಕ ದೌರ್ಜನ್ಯದ ವಿರುದ್ಧ ಸಮಾಜದ ಎಲ್ಲ ವರ್ಗಗಳು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರಾದರೂ, ಗಂಡಸರು ಈ ಪ್ರಕರಣಗಳನ್ನು ನೋಡುವ ವಿಧಾನವೇನೂ ಹೆಚ್ಚು ಬದಲಾಗಿಲ್ಲ. ರೇಪ್‌ಗಳನ್ನು ಖಂಡಿಸುವವರೇ, ಸಮಯ–ಸಂದರ್ಭ–ಸಂಬಂಧಗಳ ನೆಪದಲ್ಲಿ ಅಪರಾಧಿಗಳನ್ನು ರಕ್ಷಿಸುವ ಕೆಲಸಗಳನ್ನೂ ಮಾಡುತ್ತಿದ್ದಾರೆ. ಕೆಲವು ಪುರುಷರಂತೂ ತಮ್ಮ ಬೌದ್ಧಿಕ ಪ್ರದರ್ಶನದ ಮೂಲಕ ಲೈಂಗಿಕ ಶೋಷಣೆಯ ಕುರಿತು ಧ್ವನಿ ಎತ್ತುವ ಹೆಣ್ಣುಮಕ್ಕಳ ಬಾಯಿ ಮುಚ್ಚಿಸುತ್ತಿದ್ದಾರೆ.






**ಪ್ರೀತಿ ನಾಗರಾಜ**
ಲೇಖಕಿ, ಪತ್ರಕರ್ತೆ


ಅತ್ಯಾಚಾರಕ್ಕೆ ಧಿಕ್ಕಾರ
ಸುಧಾ ಕಾಳಜಿ

ರಾತ್ರಿ ಒಂಬತ್ತೂವರೆಯ ಸಮಯ ನಟ್ಟಿರುಳೇನಲ್ಲ. ಮಧ್ಯಮವರ್ಗದ ಕುಟುಂಬಗಳಿಗೆ ಮನೆಯಲ್ಲಿ ಊಟ ಮಾಡಿ ಟೀವಿ ನೋಡುವ ಅಥವಾ ಬೇಕಾದದ್ದನ್ನು ಓದುವ ಸಮಯ. ಸ್ವಲ್ಪ ಹರಟೆ ಹೊಡೆದೋ ಊಟವಾದ ನಂತರ ಡಯಾಬಿಟಿಸ್/ಬೀಪಿ ಕಂಟ್ರೋಲಿಗೆ ಬರಲಿ ಅಂತ ವಾಕ್ ಹೋಗುವ ಹೊತ್ತೂ ಇರಬಹುದು. ಮಧ್ಯಮ ವರ್ಗದ ಎಷ್ಟೋ ಹುಡುಗಿಯರ ಪಾಲಿಗೆ ಈ ಸಮಯ ಇನ್ನು ಮೇಲೆ ಹೊಸ ಕರ್ಫ್ಯೂ ನಿಗದಿ ಆಗುವ ಸಮಯ ಕೂಡ ಆಗಿರಬಹುದು. ಅದೂ, ಈಗಾಗಲೇ ಆಗಿಲ್ಲದೆ ಹೋಗಿದ್ದರೆ ಖಂಡಿತಾ ಆಗುವ ಸಂಭವ ಇದೆ.

ಹೈದರಾಬಾದಿನಲ್ಲಿ ನಡೆದ ಅತ್ಯಾಚಾರ ಮತ್ತು ಹುಡುಗಿಯನ್ನು ಸುಟ್ಟು ಹಾಕಿದ ಘಟನೆ ಕಾವು ಕಳೆದುಕೊಂಡಿಲ್ಲ. ಬಹಳ ವರ್ಷಗಳ ಕಾಲ, ಇದಕ್ಕಿಂತಲೂ ಘೋರ ಮತ್ತು ಇಂಥದ್ದೇ ಘಟನೆ ಆಗುವ ತನಕವೂ ಈ ಘಟನೆ ಸಮಾಜಕ್ಕೆ ಆಗಾಗ ಮುಳ್ಳಿನ ಹಾಗೆ ಚುಚ್ಚುತ್ತಲೇ ಇರುತ್ತದೆ. ಮತ್ತೊಬ್ಬ ಹುಡುಗಿಯ ಬಲಿ ಆದರೆ ಅಲ್ಲಿಗೆ ಮತ್ತೆ ಹೊಸ ಕಥೆ. ಸ್ವಲ್ಪ ದಿನ ಕಣ್ಣೀರು, ಆಕ್ರೋಶ, ಹೋರಾಟ ಇತ್ಯಾದಿ ನಡೆದು ಮತ್ತೆ ಯಥಾಪ್ರಕಾರ ಅದೇ ಪುನರಾವರ್ತನೆ. ನಮಗೆಲ್ಲಾ ಅಲ್ಲಿಯ ತನಕ ಕುಂಭಕರ್ಣ ನಿದ್ದೆ.

ಮಾಧ್ಯಮ, ಸರ್ಕಾರ, ಪೊಲೀಸ್, ನ್ಯಾಯಾಂಗ ಎಲ್ಲದರ ಮೇಲೂ ಸಮಾನ ಹೊಣೆಗಾರಿಕೆ ಇದೆ. ಈ ಮನಃಸ್ಥಿತಿ ಬದಲಾಗಬೇಕಾದರೆ, ಭಾರತ ನಿಜಕ್ಕೂ 'ವಿಶ್ವಗುರು' ಆಗಬೇಕಾದರೆ ಈ ದೇಶ ಹೆಣ್ಣುಮಕ್ಕಳನ್ನು ಗಂಡಸರ ಮನರಂಜನೆಗಾಗಿ ಯೋನಿ–ಮೊಲೆಗಳನ್ನು ಹೊತ್ತು ತಿರುಗುತ್ತಿರುವ, ಆರ್ಡರ್ ಮಾಡಿದಾಕ್ಷಣ ಶರಣಾಗಬೇಕಾದ 'ಸೆಕ್ಸ್' ಗುಲಾಮರಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕಿದೆ.

ಆರ್ಥಿಕವಾಗಿ ಕೂಡ ಹೆಣ್ಣುಮಕ್ಕಳು ಈ ದೇಶಕ್ಕೆ ಒಂದು ಆಸ್ತಿ. ಅವರ ದುಡಿಮೆಯ ಕೈಗಳು ಈ ದೇಶವನ್ನು ಮುನ್ನಡೆಸಿವೆ. ಗಂಡಸರ ಕೆಲಸಕ್ಕೆ ಇರುವ ಅರ್ಧದಷ್ಟೂ (ಅಥವಾ ಅದಕ್ಕಿಂತಲೂ ಕಡಿಮೆ ಮೌಲ್ಯ, ಎಷ್ಟೋ ಬಾರಿ ಉಚಿತ ಕೂಡ) ಮೌಲ್ಯ ಹೆಂಗಸರ ನಿರಂತರ ದುಡಿಮೆಗೆ ಇಲ್ಲ. ಆದರೆ ಈ ವಿಷಯವನ್ನು ಕಾಳಜಿ ವಹಿಸಿ ಸರಿಮಾಡುವ ಮನೋಶಕ್ತಿ ರಣಘೋರವಾಗಿ ಜಗತ್ತಿನಲ್ಲಿ ಮುನ್ನುಗ್ಗುತ್ತಿರುವ ಆಧುನಿಕ ಭಾರತಕ್ಕೆ ಇಲ್ಲ.

ಇದು ಹಾಗಿರಲಿ. ನಗರದಲ್ಲಿ ನಡೆದ ಅತ್ಯಾಚಾರದ ಸುದ್ದಿಗಳು ಬಂದ ತಕ್ಷಣ ವಾದದ ಸರಣಿಯೊಂದು ಪದೇ ಪದೇ ತಲೆ ಎತ್ತುತ್ತದೆ. 'ಯಾಕೆ ನಗರಗಳಲ್ಲಿ ಆದ ರೇಪ್ ಅನ್ನು ಮಾತ್ರ ಸುದ್ದಿ ಮಾಡುತ್ತಾರೆ? ಹಳ್ಳಿಗಳಲ್ಲಿ ಅಥವಾ ದಲಿತ ಮಹಿಳೆಯರ ಮೇಲೆ ಆದ ರೇಪ್ ಸುದ್ದಿ ಆಗುವುದೇ ಇಲ್ಲ. ಆದರೂ ಇಷ್ಟು ಕವರೇಜ್ ಕೊಡುವುದೇ ಇಲ್ಲ' ಇತ್ಯಾದಿ. ಎಲ್ಲ ಸಾಕಷ್ಟು ಮಟ್ಟಿಗೆ ಸರಿಯಾದ ಪ್ರಶ್ನೆಗಳೇ. ಆದರೆ ಇವುಗಳು ಏಳುವುದು ಎಂಥಾ ಸಂದರ್ಭದಲ್ಲಿ ಎಂದರೆ ಯಾವ ಘಟನೆಗೆ ತುರ್ತು ಗಮನ ಕೊಡಬೇಕೋ ಅದರಿಂದ ಪೂರ್ತಿ ಹಳಿ ತಪ್ಪಿಸಿ ನಿಲ್ಲಿಸಿಬಿಡುತ್ತವೆ. ಇದು ಬಹಳ ದೊಡ್ಡ ದುರಂತ ಮತ್ತು ಇದರಿಂದಾಗಿ ಸಮಸ್ಯೆಗಳ ಪರಿಹಾರ ಇಲ್ಲವೇ ಇಲ್ಲ ಎನ್ನುವಂತೆ ಆಗಿದೆ.

'ಮೀಟೂ' ಎಂಬ ಲೈಂಗಿಕ ದೌರ್ಜನ್ಯಗಳನ್ನು